**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 90/2024

ಸಿ.ಡಬ್ಲ್ಯೂ-8 ಪಿ.ಡಬ್ಲ್ಯೂ-7

| | | |
|---|---|---|
| ಹೆಸರು | ಃ | ವಿಜಯಲಕ್ಷ್ಮಿ |
| ತಂದೆಃಗಂಡ | ಃ | ಕಾಶಿನಾಥ ಬಿರಾದಾರ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | : | ಸಮಾಜ ಸೇವೆ |
| ವಾಸಸ್ಥಳ | ಃ | ಗೊಳಾ(ಬಿ) |

ದಿನಾಂಕಃ17.01.2025

**ಸತ್ಯ ಪ್ರತಿಜ್ಞೆಯ ಮೇರೆಗೆ_**

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುವುದಿಲ್ಲ ಆದರೆ ಘಟನೆ ಆದಾಗ ಸದರಿ ವ್ಯಕ್ತಿಯ ಬಗ್ಗೆ ಗೊತ್ತಾಗಿರುತ್ತದೆ. ಚಾಸಾ-1 ನನ್ನ ತಂದೆ, ಚಾಸಾ- 2 ರಿಂದ 7 ರವರ ಪರಿಚಯ ಇರುತ್ತದೆ.

ದಿ.29.07.2023 ರಂದು ಮೋಹರಂ ಹಬ್ಬ ಇದ್ದಾಗ ದರ್ಗಾದ ಹತ್ತಿರ ಮೆರವಣಿಗೆ ಪಂಜಿನ ಮೇರವಣಿಗೆ ನಡೆದಿತ್ತು ನಾವೆಲ್ಲ ನೋಡುತ್ತ ನಿಂತಿದ್ದೇವು, ಸ್ವಲ್ಪ ದೂರದಲ್ಲಿ ಗದ್ದಲಾದ ಬಗ್ಗೆ ಗೊತ್ತಾಯಿತು ಏನಾಯಿತು ಎಂದು ನೋಡಲು ಹೋದಾಗ ಆರೋಪಿ ಚಾಸಾ-1 ರವರನ್ನು ಕೆಳಗೆ ಹಾಕಿ ಕೈ ಮೇಲೆ ಕಾಲಿಟ್ಟು ಕೈ ತಿರುವಿ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾನೆ. ನಾನು ಬಿಡಿಸಲು ಹೋದಾಗ ಆರೋಪಿ ಚಾಸಾ-1 ರವರಿಗೆ ಈ ಹಿಂದೆ ನಿನ್ನನ್ನು ಬಿಟ್ಟಿದ್ದೆ, ಮತ್ತೆನಾದರೂ ಅಂದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಹೇಳಿರುತ್ತಾನೆ. ಆ ದಿನ ಹೊತ್ತಾಗಿದ್ದ ಕಾರಣ ಆಸ್ಪತ್ರೆಗೆ ಹೋಗಲಿಲ್ಲ ಮರುದಿನ ಆಸ್ಪತ್ರೆಗೆ ಹೋಗಿ ನಂತರ ನರೋಣಾ ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುತ್ತೇವೆ. ಆಸ್ಪತ್ರೆಯಲ್ಲಿ ವೈದ್ಯರು ಚಾಸಾ-1 ರವರನ್ನು ಸೋಲಾಪುರದ ಕೋಠಾಡಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ನಾವು ಚಾಸಾ1 ರವರಿಗೆ ಸೋಲಾಪೂರದ ಅಸ್ಪತ್ರೆಯಲ್ಲಿ ಆಪರೇಶನ ಮಾಡಿಸಿರುತ್ತೇವೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು : ಸ.ಸ.ಅ. ವಕೀಲರಿಂದ.**

ಚಾಸಾ-1 ರವರಿಗೆ ಆರೋಪಿತನು ಕಲ್ಲಿನಿಂದ ಎಡಗೈ ಮೊಳಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ-4 ರಿಂದ 7 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

ನಾನು 10ನೇ ತರಗತಿ ವರೆಗೆ ಶಾಲೆ ಕಲಿತಿರುತ್ತೇನೆ. ಗೋಳಾ(ಬಿ) ಗ್ರಾಮದಿಂದ ನರೋಣಾ ಅಂದಾಜು 15-20 ಕಿ.ಮೀ ಇರುತ್ತದೆ. ನಾವು ನರೋಣಾಗೆ ಮರುದಿನ ಸುಮಾರು 9 ಗಂಟೆಗೆ ಹೋಗಿರುತ್ತೇವೆ ನಾವು ಪೋಲಿಸ ಠಾಣೆಗೆ ಹೋದಾಗ ಸುಮಾರು 9.30 ರಿಂದ 10.00 ಗಂಟೆ ಆಗಿತ್ತು. ಪೋಲಿಸರು ಆಸ್ಪತ್ರೆಗೆ ಹೋಗಿ ಬರಬೇಕೆಂದು ಕಳುಹಿಸಿರುತ್ತಾರೆ ಎಂದರೆ ಸರಿ. ನಾವು ಆಸ್ಪತ್ರೆಗೆ ಹೋದಾಗ 10.00 ಗಂಟೆ ಆಗಿತ್ತು . ಆಗ ವೈದ್ಯರು ಇದ್ದರು ಎಂದರೆ ಸರಿ. ನಾನು ವೈದ್ಯರಿಗೆ ಚಾಸಾ-1 ರವರ ಮಗಳು ಎಂದು ತಿಳಿಸಿರುವುದಿಲ್ಲ. ಚಾಸಾ-1 ರವರ ಜೊತೆಗೆ ಆಸ್ಪತ್ರೆಗೆ ಪೋಲಿಸರು ಬಂದಿರಲಿಲ್ಲ. ಸುಮಾರು ಒಂದು ಗಂಟೆಗಳ ಕಾಲ ಆಸ್ಪತ್ರೆಯಲ್ಲಿದ್ದೇವು. ೦ರ

ನರೋಣಾ ಆಸ್ಪತ್ರೆಯಲ್ಲಿ ಚಾಸಾ-1 ರವರ ಎಕ್ಸರೇ ತೆಗೆದಿರುವುದಿಲ್ಲ, ಸಾಕ್ಷಿ ಮುಂದುವರೆದು ಅಲ್ಲಿ ಸೌಲಬ್ಯ ಇರಲಿಲ್ಲ ಎಂದು ನುಡಿಯುತ್ತಾರೆ. ಕೈಯಲ್ಲಿರುವ ಎಲುಬು ಮುರಿದ ಬಗ್ಗೆ ಎಕ್ಸರೇ ಮಾಡಿ ನೋಡಿದಾಗ ಮಾತ್ರ ಗೊತ್ತಾಗುತ್ತದೆ ಎಂದರೆ ಸರಿ. ವೈದ್ಯರು ನಮಗೆ ಸೋಲಾಪೂರದ ಕೋಠಾಡಿಯಾ ಆಸ್ಪತ್ರೆಗೆ ಹೋಗಬೇಕೆಂದು ಯಾವುದೇ ಪತ್ರವನ್ನು ನೀಡಿರಲಿಲ್ಲ ಮತ್ತು ಹೇಳಿರಲಿಲ್ಲ ನಾವು ಮನೆಯಲ್ಲಿ ವಿಚಾರಣೆ ಮಾಡಿ ಸದರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ವೈದ್ಯಕಿಯ ತಪಾಸಣೆ ಮಾಡಿಸಿದ ನಂತರ ಸುಮಾರು 11.30 ರಿಂದ 12.00 ರ ಒಳಗೆ ಪೋಲಿಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇವೆ. ದೂರನ್ನು ನಾವೇ ಬರೆದಿರುತ್ತೇವೆ. ದೂರನ್ನು ನಾವು ಹೇಳಿದ ಮೇರೆಗೆ ಪೋಲಿಸರೇ ಬರೆದಿರುತ್ತಾರೆ. ಚಾಸಾ1 ರವರು ಹೇಳಿದಂತೆ ಪೋಲಿಸರು ದೂರನ್ನು ಬರೆದಿರುತ್ತಾರೆ. ದಿ.01.08.2023 ರಂದು ಸೋಲಾಪೂರದ ಕೋಠಾಡಿಯಾ ಆಸ್ಪತ್ರೆಗೆ ಹೊಗಿರುತ್ತೇವೆ. ಅಲ್ಲಿ ನಾವು 8-9 ದಿನ ಇದ್ದೇವು. ನಾವು ಆಸ್ಪತ್ರೆಗೆ ಹೋದ ಬಗ್ಗೆ ಪೋಲಿಸರಿಗೆ ವಿಷಯ ತಿಳಿಸಿರುತ್ತೇವೆ. ಸದರಿ ವಿಷಯ ನಾವು ಪೋಲಿಸರಿಗೆ ತಿಳಿಸಿರುತ್ತೇವೆ ಆಸ್ಪತ್ರೆಯವರು ತಿಳಿಸಿರುವುದಿಲ್ಲ. ಚಾಸಾ-1 ರವರಿಗೆ ಸದರಿ ಚಿಕಿತ್ಸೆಯು ಆಳಂದ ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಬಹುದು ಎಂದರೆ ಸರಿ ಸಾಕ್ಷಿಯು ನಾವು ಆಳಂದ ಆಸ್ಪತ್ರೆಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ನಾವು ಕಲಬುರಗಿಯ ಖಾಸಗಿ ಆಸ್ಪತ್ರೆಗೆ ಹೋಗಿರುತ್ತೇವೆ ಹೆಸರು ನೆನಪಿರುವುದಿಲ್ಲ. ಕಲಬುರಗಿ ಆಸ್ಪತ್ರೆಯಲ್ಲಿ ನಮಗೆ 2-3 ಲಕ್ಷ ರೂ. ಖರ್ಚು ಬರುತ್ತದೆ ಎಂದು ಹೇಳಿದ್ದರಿಂದ ನಾವು ಸೋಲಾಪೂರದ ಆಸ್ಪತ್ರೆಗೆ ಹೋಗಿರುತ್ತೇವೆ. ಕಲಬುರಗಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ನಾವು ಕಲಬುರಗಿಯ ಜಿಮ್ಸ ಆಸ್ಪತ್ರೆಗೆ ಹೋಗಿರುವುದಿಲ್ಲ. ವೈದ್ಯರು ನಮಗೆ ಸರ್ಕಾರಿ ಆಸ್ಪತ್ರೆಗೆ ಹೋಗಲು ತಿಳಿರುವುದಿಲ್ಲ. ನಾವು ಪೋಲಿಸರಿಗೆ ಕಲಬುರಗಿಯ ಆಸ್ಪತ್ರೆಯಲ್ಲಿ 2-3 ಲಕ್ಷ ರೂ. ಹಣ ಖರ್ಚಾಗುತ್ತದೆ ಎಂದು ಹೇಳಿರುತ್ತಾರೆಂದು ತಿಳಿಸಿರುವುದಿಲ್ಲ. ಸದರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಪೋಲಿಸರಿಗೆ ತಿಳಿಸಿರುವುದಿಲ್ಲ.

ಘಟನೆ ನಡೆಯುವ ದಿನ ಪಂಜಿನ ಮೆರವಣಿಗೆ ಇದ್ದ ಕಾರಣ ಸ್ಥಳದಲ್ಲಿ ಊರಿನ ಜನ ಸೇರಿದ್ದರು. ಅವರ ಹೆಸರು ಹೇಳಲು ಬರುವುದಿಲ್ಲ. ಚಾಸಾ-1 ರವರ ಯಾವುದೇ ರಕ್ತದ ಕಲೆ ಅಗಿರಲಿಲ್ಲ ಆದರೆ ಗುಪ್ತಗಾಯ ಆಗಿತ್ತು. ನಾನು ಪೋಲಿಸರಿಗೆ ಘಟನೆ ನಡೆದಾಗ ನಾನು ಘಟನಾ ಸ್ಥಳದಲ್ಲಿ ಇದ್ದ ಬಗ್ಗೆ ತಿಳಿಸಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಘಟನೆ ನೆಡದ ವಿಷಯವು ನನ್ನ ತಂದೆ ಮನಗೆ ಬಂದು ರಾತ್ರಿ 8.30 ಗಂಟೆಗೆ ವಿಷಯ ತಿಳಿಸಿದಾಗ ನನಗೆ ಗೊತ್ತಾಗಿರುತ್ತದೆ ಎಂದು ನಮೂದು ಇರುವುದು ಸರಿಯಾಗಿರುತ್ತದೆ.

ಆರೋಪಿ ಮತ್ತು ಚಾಸಾ-1 ರವರ ಮದ್ಯ ಯಾವುದೇ ಹಣದ ವ್ಯವಹಾರ ಇರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು 2016 ರಲ್ಲಿಯೂ ಸಹ ಆರೋಪಿಯು ಚಾಸಾ-1 ರವರ ಮೇಲೆ ಹಲ್ಲೆ ಮಾಡಿದ್ದರು ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ಪೋಲಿಸರ ಮುಂದೆ ಹೇಳಿರುತ್ತೇನೆ. ಅದನ್ನು ಪೋಲಿಸರು ಬರೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಈ ರೀತಿ ಬೇರೆ ಎಲ್ಲಿಯೂ ಸಾಕ್ಷಿ ಹೇಳಿಲ್ಲ ಎಂದರ ಸರಿ. ನಾನು ಪೋಲಿಸ ಠಾಣೆಗೆ ಹೋದಾಗ ಪೋಲಿಸರು ಏನು

ಕೇಳಿ ಬರೆದುಕೊಂಡಿರುವುದಿಲ್ಲ. ನಾನು ಚಾಸಾ-1 ರವರಿಗೆ ಸಹಾಯ ಮಾಡಲು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂ ದುವರೆದು ಬೇರೆ ಯಾರಿಗಾದರೂ ಅನ್ಯಾಯ ವಾಗಿದ್ದರೂ ನಾನು ಸಾಕ್ಷಿ ನುಡಿಯುತ್ತಿದ್ದೆ ಎಂದು ನುಡಿಯುತ್ತಿದ್ದಾರೆ. ಚಾಸಾ-1 ರವರು ಆರೋಪಿಗೆ ಹಣ ಕೊಡಬೇಕೆಂದು ಹೇಳಿರುವುದಿಲ್ಲ. ಆರೋಪಿಯು ಹಣ ನೀಡದ ಕಾರಣ ನಾನು ಮತ್ತು ಚಾಸಾ-1 ರವರು ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸೋಲಾಪೂರದ ಆಸ್ಪತ್ರೆಯ ದಾಖಲೆಗಳು ಪೋಲಿಸರು ನಮಗೆ ಕೇಳದ ಕಾರಣ ಕೊಟ್ಟಿರುವುದಿಲ್ಲ ಸಾಕ್ಷಿ ಮುಂದುವರೆದು ನಮ್ಮ ಬಳಿ ಇರುತ್ತವೆ ಎಂದು ಹೇಳುತ್ತಾರೆ. ನರೋಣಾ ಆಸ್ಪತ್ರೆಯಲ್ಲಿಯೂ ಸಹ ದಾಖಲೆಗಳನ್ನು ಕೇಳದ ಕಾರಣ ಕೊಟ್ಟಿರುವುದಿಲ್ಲ. ಯಾವುದೇ ಘಟನೆ ನಡೆಯದಿದ್ದರೂ ನಾನು ಮತ್ತು ಚಾಸಾ-1 ರವರು ಸೇರಿ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ಚಾಸಾ-4 ರಿಂದ 7 ರವರ ಜೊತೆಗೆ ಚಾಸಾ-1 ರವರಿಗೆ ಯಾವುದೇ ವೈರತ್ವ ಇಲ್ಲ ಎಂದರೆ ಸರಿ.

ದಿ.29.07.2023 ರಂದು ಮೋಹರಂ ಹಬ್ಬ ಇದ್ದಾಗ ದರ್ಗಾದ ಹತ್ತಿರ ಮೆರವಣಿಗೆ ಪಂಜಿನ ಮೇರವಣಿಗೆ ನಡೆದಿತ್ತು ನಾವೆಲ್ಲ ನೋಡುತ್ತ ನಿಂತಿದ್ದೇವು, ಸ್ವಲ್ಪ ದೂರದಲ್ಲಿ ಗದ್ದಲಾದ ಬಗ್ಗೆ ಗೊತ್ತಾಯಿತು ಎನಾಯಿತು ಎಂದು ನೋಡಲು ಹೋದಾಗ ಆರೋಪಿ ಚಾಸಾ-1 ರವರನ್ನು ಕೆಳಗೆ ಹಾಕಿ ಕೈ ಮೇಲೆ ಕಾಲಿಟ್ಟು ಕೈ ತಿರುವಿ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಿಡಿಸಲು ಹೋದಾಗ ಆರೋಪಿ ಚಾಸಾ-1 ರವರಿಗೆ ಈ ಹಿಂದೆ ನಿನ್ನನ್ನು ಬಿಟ್ಟಿದ್ದೆ, ಮತ್ತೆನಾದರೂ ಅಂದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಹೇಳಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಹೊತ್ತಾಗಿದ್ದ ಕಾರಣ ಆಸ್ಪತ್ರೆಗೆ ಹೋಗಲಿಲ್ಲ ಮರುದಿನ ಆಸ್ಪತ್ರೆಗೆ ಹೋಗಿ ನಂತರ ನರೋಣಾ ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ವೈದ್ಯರು ಚಾಸಾ-1 ರವರನ್ನು ಸೋಲಾಪುರದ ಕೋಠಾಡಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಚಾಸಾ1 ರವರಿಗೆ ಸೋಲಾಪೂರದ ಅಸ್ಪತ್ರೆಯಲ್ಲಿ ಆಪರೇಶನ ಮಾಡಿಸಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-1 ರವರಿಗೆ ಆರೋಪಿತನು ಕಲ್ಲಿನಿಂದ ಎಡಗೈ ಮೊಳಕೈಗೆ ಹೊಡೆದಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರಿಂದ 7 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ–** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು, ಆಳಂದ